## ನಿರ್ದೇಶಕರ ಮೇಲೆ ಕಂಗನಾ ಶೂಟೌಟ್!

ಸಿನಿಮಾ ಪ್ರಚಾರಕ್ಕಾಗಿ ತಾರೆಯರು ವಿವಾದಗಳನ್ನು ಸೃಷ್ಟಿಸುವುದು ಹೊಸತಲ್ಲ. ಚಿಕ್ಕದೊಂದು ಕಿಡಿ ಹೊತ್ತಿಸಿದರೆ ಸಾಕು ಅದು ಮಾಧ್ಯಮಗಳಲ್ಲಿ ಸುದ್ದಿಯಾಗಿ ಪ್ರಚಾರ ಪಡೆದುಕೊಳ್ಳುತ್ತದೆ ಎಂಬುದು ಸಿನಿಮಂದಿಗೆ ಚೆನ್ನಾಗಿ ಗೊತ್ತಿದೆ. ಈ



ಬಾರಿ ಕಿಡಿ ಹೊತ್ತಿಸುವ ಸರದಿ ನಟಿ ಕಂಗನಾ ರನೌತ್ ಅವರದು. 'ಶೂಟೌಟ್ ಅಟ್ ವಾಡಾಲಾ' ಮುಂದಿನ ವಾರ ತೆರೆಗೆ ಬರಲು ಸಿದ್ಧವಾಗುತ್ತಿದ್ದಂತೆ ಕಂಗನಾ ಚಿತ್ರದ ನಿರ್ದೇಶಕ ಸಂಜಯ್ ಗುಪ್ತಾ ಮೇಲೆ ಮುನಿಸಿಕೊಂಡಿದ್ದಾರೆ. ಚಿತ್ರೀಕರಣದ ವೇಳೆ ಅವಿವೇಕದ ಬೇಡಿಕೆಯನ್ನಿಟ್ಟದ್ದೇ ಗುಪ್ತಾ ಮೇಲೆ ಆಕೆ ಸಿಟ್ಟಿಗೇಳಲು ಕಾರಣವಂತೆ. ಚಿತ್ರದಲ್ಲಿ ಕಂಗನಾ ಮಹಾರಾಷ್ಟ್ರದ ವಿಧವೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಜೊತೆಗೆ ವಿಶೇಷ ಹಾಡೊಂದರಲ್ಲಿ ಕಂಗನಾ ಜಾನ್ ಅಬ್ರಹಾಂ ಮತ್ತು ಸೋಫಿ ಚೌಧುರಿ ಅವರೊಂದಿಗೆ ಹೆಜ್ಜೆ ಹಾಕಬೇಕಿತ್ತು. ವಿಧವೆ ಪಾತ್ರ ಕೊಟ್ಟು ಡಿಸ್ಕೋ ಹಾಡಿಗೆ ನರ್ತಿಸು ಎಂದರೆ ಅವಿವೇಕತನವಲ್ಲವೇ ಎಂಬ ಪ್ರಶ್ನೆ ಕಂಗನಾ ಅವರದು. ಇದನ್ನು ಅವರು ನೇರವಾಗಿ ಮಾಧ್ಯಮದ ಮುಂದಿಟ್ಟಿಲ್ಲ. ಬದಲಾಗಿ ಗೆಳತಿಯರ ಜೊತೆ ಹಂಚಿಕೊಂಡಿದ್ದಾರೆ. 'ಪಾತ್ರದ ಹಿಂದಿನ ಕಥೆಯನ್ನು ಕೆದಕಿದಾಗ ಅಂಥ ದೃಶ್ಯ ಬರುತ್ತದೆ. ಆಗ ಕುಣಿದರೆ ತಪ್ಪೇನು' ಎಂಬ ಮರುಪ್ರಶ್ನೆ ನಿರ್ದೇಶಕರದು. ಕಥೆಯಲ್ಲಿ ಇಲ್ಲದ ಹಾಡನ್ನು ಇದ್ದಕ್ಕಿದ್ದಂತೆ ತುರುಕಿರುವ ನಿರ್ದೇಶಕರ ಬಗ್ಗೆ ಕಂಗನಾ ಕೆಂಡಾಮಂಡಲ ವಾಗಿದ್ದಾರಂತೆ. ಈ ಕಾರಣಕ್ಕಾಗಿಯೇ ಕಳೆದೆರಡು ತಿಂಗಳು ನಡೆದ ಚಿತ್ರದ ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗವಹಿಸಿಲ್ಲ. 'ನೀತಿ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಸಿನಿಮಾ ಮಾಡುತ್ತಿರುವಾಗ ಸಿನಿಮಾದಲ್ಲಿ ತರ್ಕ ಹುಡುಕುತ್ತಿರುವ ಕಂಗನಾ ನಡೆ ತಮಾಷೆಯಾಗಿದೆ' ಎನ್ನುವುದು ಬಾಲಿವುಡ್ ಮಂದಿಯ ಕುಹಕ.




## ನೂರರ ನೆನಪು, ನೆಪದಲ್ಲಿ...

**ಕೋ**ಟಿ, ಶತಕೋಟಿ ಲೆಕ್ಕಾಚಾರದಲ್ಲೇ ಸದಾ ಮುಳುಗಿರುವ ಬಾಲಿವುಡ್, ಭಾರತೀಯ ಚಿತ್ರರಂಗಕ್ಕೆ ನೂರು ವರ್ಷ ತುಂಬಿದ ಸಂಭ್ರಮದ ಸಂದರ್ಭವನ್ನು ವ್ಯಾವಹಾರಿಕ ಲೋಕದಿಂದ ಹೊರಬಂದು ಆಚರಿಸುತ್ತಿದೆ. ಅದಕ್ಕೊಂದು ಉದಾಹರಣೆ 'ಬಾಂಬೆ ಟಾಕೀಸ್' ಚಿತ್ರ. ದಾದಾ ಸಾಹೇಬ್ ಫಾಲ್ಕೆ ಭಾರತದ ಮೊದಲ ಚಲನಚಿತ್ರ 'ರಾಜಾ ಹರಿಶ್ಚಂದ್ರ'ವನ್ನು ತೆರೆಗೆ ತಂದದ್ದು 1913ರ ಮೇ 3ರಂದು. 2013ರ ಮೇ 3ರಂದು ಬಿಡುಗಡೆಯಾಗುವ ಮೂಲಕ ಆ ಅವಿಸ್ಮರಣೀಯ ಕ್ಷಣವನ್ನು ಮೆಲುಕು ಹಾಕಲಿದೆ 'ಬಾಂಬೆ ಟಾಕೀಸ್'.

ಇದು ಎಂದಿನ ಬಾಲಿವುಡ್ ಸಿನಿಮಾವಲ್ಲ. ಪ್ರಸ್ತುತ ಬಾಲಿವುಡ್‌ನ ಮುಂಚೂಣಿ ನಿರ್ದೇಶಕರುಗಳಾದ ಅನುರಾಗ್ ಕಶ್ಯಪ್, ಕರಣ್ ಜೋಹರ್, ಜೋಯಾ ಅಖ್ತರ್ ಮತ್ತು ದಿವಾಕರ್ ಬ್ಯಾನರ್ಜಿ ನಿರ್ದೇಶಿಸಿರುವ ನಾಲ್ಕು ಕಿರುಚಿತ್ರಗಳ ಸಂಗಮ 'ಬಾಂಬೆ ಟಾಕೀಸ್'. ಪ್ರತಿ ಚಿತ್ರವೂ 20–25 ನಿಮಿಷಗಳ ಅವಧಿ ಹೊಂದಿವೆ. ಅಮಿತ್ ತ್ರಿವೇದಿ ಸಂಗೀತ ನೀಡಿದ್ದಾರೆ. ಪ್ರತಿ ಕಿರುಚಿತ್ರವೂ ಜನಜೀವನದ ಮೇಲೆ ಸಿನಿಮಾ ಹೇಗೆ ಪ್ರಭಾವ ಬೀರಿದೆ ಎಂಬ ಕಥೆಯನ್ನು ಹೇಳಲಿವೆಯಂತೆ. ಅಮಿತಾಬ್ ಬಚ್ಚನ್, ರಾಣಿ ಮುಖರ್ಜಿ, ರಣದೀಪ್ ಹೂಡ, ಸಕಿಬ್ ಸಲೀಮ್, ಕತ್ರಿನಾ ಕೈಫ್, ರಣಬೀರ್ ಕಪೂರ್, ರಣವೀರ್ ಶೌರಿ, ಸದಾಶಿವ್ ಅಮ್ರಪುರ್ಕರ್ ಮುಂತಾದವರ ತಾರಾಬಳಗ ಈ ವಿಶಿಷ್ಟ ಪ್ರಯೋಗವನ್ನು ಮತ್ತಷ್ಟು ಕುತೂಹಲಕಾರಿಯಾಗಿಸಿದೆ.

## ಜಾನ್ ಪ್ರಾಣಿ ಪ್ರೀತಿ



ಸಿನಿಮಾಗಳಲ್ಲಿ ನೆಗೆಟಿವ್ ಪಾತ್ರಗಳಲ್ಲೇ ಹೆಚ್ಚು ಮಿಂಚಿದವರು ನಟ ಜಾನ್ ಅಬ್ರಹಾಂ. ತೆರೆ ಮೇಲೆ ಅಬ್ಬರಿಸುವ ಬಾಲಿವುಡ್‌ನ ಮತ್ತೊಬ್ಬ ಬ್ಯಾಡ್ ಬಾಯ್ ಜಾನ್‌ರದ್ದು ಪ್ರಾಣಿಗಳ ವಿಚಾರದಲ್ಲಿ ಹೂವಿನಂಥ ಮನಸ್ಸು. ಅದಕ್ಕೆ 'ಪೇಟಾ'ದ ರಾಯಭಾರಿಯಾಗಿರುವುದೇ ನಿದರ್ಶನ. ರಾಯಭಾರಿಯಾಗಿ ಜಾಹಿರಾತುಗಳಲ್ಲಿ, ಪ್ರಚಾರದಲ್ಲಿ ಕಾಣಿಸಿಕೊಳ್ಳುವುದು ಮಾತ್ರ ತನ್ನ ಕರ್ತವ್ಯವಲ್ಲ ಎಂಬುದನ್ನು ಅರಿತಿರುವ ಜಾನ್, ಪ್ರಾಣಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ದೇಶದ ಎಲ್ಲಾ ಸರ್ಕಸ್ ಕಂಪೆನಿಗಳಿಂದಲೂ ಪ್ರಾಣಿಗಳನ್ನು ಬಂಧಮುಕ್ತಗೊಳಿಸಬೇಕು ಎಂದು ಅವರು ಕೇಂದ್ರದ ಪರಿಸರ ಮತ್ತು ಅರಣ್ಯ ಇಲಾಖೆಗೆ ಪತ್ರ ಬರೆದಿದ್ದಾರಂತೆ.

■ ಅಮಿ